
## ಕವಿತೆ




## ಗಣೇಶ ಹೊಸ್ಮನೆ

ಕಲೆ: ಎಸ್.ಎಸ್. ಕಾಖಂಡಕಿ


# ದೇವರ ಉಸಿರು



ಮುಂಗಾರಿನ ಗಾಳಿ ಮಳೆಯಂತೆ
ಎಲ್ಲೋ ತೇಲಿಬಂದಂತಾಯಿತು
ನಿನ್ನ ನಿಟ್ಟುಸಿರು
ನಳನಳಿಸಿ ಹಸಿರೆಲೆಗಳ ತುಂಬ
ಜೀವ ಅಲುಗಾಡಿದ ಸದ್ದು

ನವಿರಾಗಿ ಸುಳಿದು ಕಣಿವೆ ಕೊಳ್ಳಗಳಲ್ಲಿ
ಹರಿದ ತಂಪಿಗೆ ಒಮ್ಮೆ
ಕಂಪಿಸಿತು ದೇಹ
ಕೆಲವೇ ಕ್ಷಣ, ಎಲ್ಲೆಲ್ಲೂ
ಭರ್ರನೇ ಎದ್ದು ಬೀಸಿ ಬಿರುಗಾಳಿ
ನೆಲವೇ ಮುಗಿಲಲ್ಲಿ
ಹಾರಿ ಹೋದಂತೆ

ಸಣ್ಣ ದೀಪಗಳೆಲ್ಲವೂ ಆರಿ
ಸುತ್ತೆಲ್ಲ ಕತ್ತಲೆ
ಉರಿವ ಬೆಂಕಿಯೆಲ್ಲವೂ ಹೊತ್ತಿ
ಊರೆಲ್ಲ ಕಾಡ್ಗಿಚ್ಚು
ಲಟಲಟನೇ ತರಿದು ಬಿದ್ದಂತೆ
ಯಾರದೋ ಕೊರಳು
ಪಟಪಟನೇ ಒಡೆದಂತೆ
ಯಾರ್‍ಯಾರದೋ ತಲೆ
ಹರಿದಂತೆ ನೆಲದ ಕರುಳು

ಹೊತ್ತಿ ಉರಿವ
ನಿನ್ನ ಉಸಿರ ಬಿಸಿಯಲಿ
ಎಲ್ಲರೂ ದೂರ ದೂರ
ದೇವರೇ ನಿಲ್ಲಿಸು
ಎಲ್ಲರೂ ಕುಡಿದು ಬದುಕುವ
ನಿನ್ನ ಉಸಿರೇಕೆ ಇಷ್ಟೊಂದು ಭಾರ?